ಪರಿಗಣಿಸಲ್ಪಟ್ಟ ಸಂಗತಿಗಳಿಗೆ, ವಸ್ತುಗಳಿಗೆ. ಏಕೆಂದರೆ ಕೆಟ್ಟದ್ದು ಅನ್ನಿಸಿಕೊಂಡ ವಿಷಯಗಳು ಮತ್ತು ವಸ್ತುಗಳು ಮನುಷ್ಯನಲ್ಲಿ ಹೆಚ್ಚು ಕುತೂಹಲವನ್ನು ಹುಟ್ಟಿಸುತ್ತವಲ್ಲದೆ ಹೆಚ್ಚಿನ ತೃಪ್ತಿಯನ್ನೂ ನೀಡುತ್ತವೆ. ಆದರೆ ಅದರಿಂದ ಉಂಟಾಗುವ ಪರಿಣಾಮಗಳು ನೋವನ್ನು ಕೊಡುತ್ತವೆ, ಪಶ್ಚಾತ್ತಾಪವನ್ನೂ ಉಂಟುಮಾಡುತ್ತವೆ. ನಿನಗೆ ಮೊನ್ನೆಯ ಘಟನೆಯಿಂದ ಪಶ್ಚಾತ್ತಾಪ ಉಂಟಾಗಿದ್ದರೆ ಮತ್ತೆಂದೂ ನೀನು ಆ ಕೆಲಸವನ್ನು ಮಾಡುವುದಿಲ್ಲ. ನೊಬೆಲ್ ಪ್ರಶಸ್ತಿಯ ಬಗ್ಗೆ ನಿನಗೆ ಗೊತ್ತಿರಬೇಕಲ್ಲ?' ಗುನ್ನಾಲಾಲ್ ಮೊಮ್ಮಗನ ಕೆನ್ನೆ ಸವರಿ ಹೇಳಿದ್ದ.

'ಗೊತ್ತು ಗುನ್ನಾ, ಸಾಮಾನ್ಯವಾಗಿ ಅಪ್ರತಿಮ ಸಾಧನೆ ಮಾಡಿದ ಸಾಹಿತಿಗಳಿಗೆ, ವಿಜ್ಞಾನಿಗಳಿಗೆ ನೊಬೆಲ್ ಪ್ರಶಸ್ತಿ ಕೊಡ್ತಾರೆ. ನಮ್ಮ ಸಿಲೆಬಸ್‌ನಲ್ಲಿ ಇದೆ. ನೊಬೆಲ್ ಪ್ರಶಸ್ತಿ ಪಡೆದ ರವೀಂದ್ರನಾಥ್ ಟ್ಯಾಗೋರ್, ಸರ್ ಸಿ.ವಿ. ರಾಮನ್ ಹೆಸರುಗಳು ನೆನಪಿವೆ ನನಗೆ.' ಸೋನಾಲಾಲ್ ತಾತನ ಕೈ ಅಮುಕುತ್ತಾ ಹೇಳಿದ್ದ. ಸೋನಾಲಾಲ್ ಪ್ರೈಮರಿ ಸ್ಕೂಲಿನಲ್ಲಿ ಓದುತ್ತಿದ್ದಾಗ ಅಕ್ಷರಗಳನ್ನು, ಅಂಕಿಗಳನ್ನು ನೆನಪಿಸಿಕೊಳ್ಳಲು ಸ್ವಲ್ಪ ಪ್ರಯಾಸಪಡುತ್ತಿದ್ದ. ಇದು ಗುನ್ನಾಲಾಲನನ್ನು ಸ್ವಲ್ಪ ಚಿಂತೆಗೆ ಈಡುಮಾಡಿತ್ತು. ತನ್ನ ಚೇಂಬರಿನಲ್ಲಿ ಈ ಬಗ್ಗೆ ಯೋಚಿಸುತ್ತಾ ಕೂತಿದ್ದಾಗ ಪಿ.ಎ. ಹರ್ಷವರ್ಧನ್ ಶಿರೋಡ್ಕರ್ ಕಂಪ್ಯೂಟರಿನಲ್ಲಿ ಕಣ್ಣು ನೆಟ್ಟು 'ಏನು ಯೋಚನೆ ಮಾಡ್ತಿದ್ದೀರಿ ಕಾಕಾ' ಎಂದು ಕೇಳಿದ್ದ.

ಹರ್ಷವರ್ಧನ್ ಶಿರೋಡ್ಕರ್ ಗುನ್ನಾಲಾಲನ ನಂಬಿಕಸ್ಥ ಕೆಲಸಗಾರರಲ್ಲಿ ಮೊದಲನೆಯವನಾಗಿದ್ದ. ಕಂಪನಿಯಲ್ಲಿ ಎಲ್ಲರೂ ಸಾರ್, ಸ್ವಾಮಿ ಎಂದು ಕರೆಯುತ್ತಿದ್ದರೂ ಶಿರೋಡ್ಕರ್ ಮಾತ್ರ ಸಂಬಂಧಿ ಸೂಚಕವಾದ ಕಾಕಾ, ಚಾಚಾ ಎಂಬ ಪದಗಳಿಂದಲೇ ಗುನ್ನಾಲಾಲನನ್ನು ಸಂಭೋದಿಸುತ್ತಿದ್ದ. ಇದು ಒಂಥರಾ ಇಂಟಿಮಸಿಯನ್ನು ಬೆಳೆಸಿತ್ತು. ಹಾಗಾಗಿ ಕೆಲವು ವೈಯಕ್ತಿಕ ವಿಷಯಗಳನ್ನು ಕೂಡ ಗುನ್ನಾಲಾಲ್ ಶಿರೋಡ್ಕರ್ ಜೊತೆ ಹಂಚಿಕೊಳ್ಳುತ್ತಿದ್ದ. ಇಂಡಸ್ಟ್ರಿಯಲ್ ಸೈಕಾಲಜಿಯಲ್ಲಿ ಡಬಲ್ ಡಿಗ್ರಿ ಹೋಲ್ಡರ್ ಆಗಿದ್ದ ಶಿರೋಡ್ಕರ್ ಅಪಾರವಾದ ಸಾಮಾನ್ಯ ಜ್ಞಾನವನ್ನೂ ಹೊಂದಿದ್ದ. ಗುನ್ನಾಲಾಲ್ ತನ್ನ ಮೊಮ್ಮಗನ ಮರೆವಿನ ವಿಷಯದ ಬಗ್ಗೆ ಹೇಳಿದ್ದ.

'ಅಷ್ಟಕ್ಕೆ ಚಿಂತೆ ಏಕೆ ಕಾಕಾ, ಮುಲುಂದ್ ಏರಿಯಾದ ಜೈಭಾರತ್ ಸ್ಕೂಲ್ ಹಿಂಭಾಗದಲ್ಲಿ ಮಿಡ್ ಬ್ರೈನ್ ಥರ್ಡ್ ಐ ಆಕ್ಟಿವೇಷನ್ ಸೆಂಟರ್ ಇದೆ, ಐದಾರು ತಿಂಗಳು ಸಂಜೆ ಒಂದು ಗಂಟೆ ಕಾಲ ನಮ್ಮ ಸೋನಾಲಾಲರಿಗೆ ಟ್ಯೂಷನ್ ಕೊಡಿಸಿದರೆ ಎಲ್ಲಾ ಪರ್ಫೆಕ್ಟ್ ಆಗ್ತದೆ. ಮಿಡ್ ಬ್ರೈನ್ ಆ್ಯಕ್ಟಿವೇಷನ್‌ನಿಂದ ಮಕ್ಕಳು ಬುದ್ಧಿವಂತರಾಗುತ್ತಾರಲ್ಲದೆ ನೆನಪಿನ ಶಕ್ತಿ ಜಾಸ್ತಿಯಾಗುತ್ತದೆ. ಕೆಲವು ಸೈಕಾಲಜಿಸ್ಟರು ಅದನ್ನು ಫೇಕ್ ಎಂದು ಕರೆದರೂ ಮಕ್ಕಳಲ್ಲಿ ಖಂಡಿತವಾಗಿಯೂ ಕಾನ್ಫಿಡೆನ್ಸ್ ಬಿಲ್ಡ್ ಆಗ್ತದೆ. ಒಂದು ಗಂಟೆ ಸೋನಾರನ್ನು ಅಲ್ಲಿ ಕೂರಿಸುವುದರಿಂದ ನಾವೇನೂ ಕಳೆದುಕೊಳ್ಳುವುದಿಲ್ಲ' ಎಂದು ಶಿರೋಡ್ಕರ್ ಕಂಪ್ಯೂಟರ್‌ನಿಂದ ಮುಖವನ್ನು ಕಿತ್ತು ಗುನ್ನಾಲಾಲನ ಕಡೆ ತಿರುಗಿಸಿದ. ಅಷ್ಟೇ, ಮಾರನೆಯ ದಿನ ಬೆಳಿಗ್ಗೆ ಹನ್ನೊಂದು ಗಂಟೆಗೆ ಮಿಡ್ ಬ್ರೈನ್ ಥರ್ಡ್ ಐ ಆಕ್ಟಿವೇಷನ್ ಸೆಂಟರಿನ ಓನರ್ ವಾದಿರಾಮ್ ಕಪೂರ್ ಗುನ್ನಾಲಾಲನ ಎದುರು ಸೀಟಿನಲ್ಲಿ ಕುಳಿತಿದ್ದ. ಸುಮಾರು ಮೂವತ್ತೈದು ನಲವತ್ತು ವರ್ಷಗಳ ನಡುವಿನ ಸ್ಮಾರ್ಟ್ ಆಗಿದ್ದ ಯುವಕ. 'ಪ್ರಿನ್ಸ್ ಸಿನಿಮಾದಲ್ಲಿ ಶಮ್ಮಿಕಪೂರ್ ಕಂಡಂಗಾಯ್ತು ನಿಮ್ಮನ್ನು ನೋಡಿ' – ವಾದಿರಾಮ್ ಕಪೂರನನ್ನು ಮೆಚ್ಚಿಸಲಿಕ್ಕೇನೂ ಹೇಳಿರಲಿಲ್ಲ ಗುನ್ನಾಲಾಲ್. ಶಮ್ಮಿಕಪೂರನ ಸಿನಿಮಾಗಳೆಂದರೆ ತುಂಬಾ ಇಷ್ಟಪಡುತ್ತಿದ್ದ. ಪ್ರಿನ್ಸ್ ಸಿನಿಮಾದ 'ಬದನ್ ಪೆ ಸಿತಾರೆ ಲಪೇಟೆ ಹುವೆ' ಹಾಡನ್ನು ಈಗಲೂ ಆಗಾಗ ಗುನುಗುತ್ತಾ ಆ ಸಿನಿಮಾದ ಹೀರೋಯಿನ್ ವೈಜಯಂತಿಮಾಲಳನ್ನು ನೆನಪಿಸಿಕೊಳ್ಳುತ್ತಾನೆ.

'ಅಯ್ಯೋ ಆ ಕಪೂರ್ ಎಲ್ಲಿ, ಈ ಕಪೂರ್ ಎಲ್ಲಿ ಸಾರ್. ಹಾಗೆ ನೋಡಿದರೆ ಮುಂಬಯಿಯಲ್ಲಿ ಕಪೂರ್, ಬಚ್ಚನ್ ಎಂಬ ಹೆಸರುಗಳಿಗೆ ಬರವೇ ಇಲ್ಲ. ಧಾರಾವಿ ಕೊಳಗೇರಿಯಲ್ಲಿ ಇವೊತ್ತಿಗೂ ಜನ ಅಮಿತಾಬ್ ಬಚ್ಚನ್‌ನ ದೀವಾರ್ ಸಿನಿಮಾ ಬಂದರೆ ಮೂರು ಶೋನೂ ನೋಡ್ತಾರೆ. ತಮ್ಮ ಮಕ್ಕಳಿಗೆ ಸಿನಿಮಾ ಹೀರೋಗಳ ಮತ್ತು ಅಂಡರ್‌ವರ್ಲ್ಡ್ ಡಾನ್‌ಗಳ ಹೆಸರಿಡೋದು ಮುಂಬಯಿಯ ನೂರಾರು ಪೇರೆಂಟ್ಸ್‌ಗೆ ಒಂದು ರೀತಿಯ ಭಾವನಾತ್ಮಕ ಸಂಗತಿಯೇ ಆಗಿದೆ. ಇರಲಿ, ನೀವು ಬಹಳ ಬುದ್ಧಿವಂತರಾಗಿರುವುದರಿಂದಲೇ ಈ ಸೀಟಿನಲ್ಲಿ ಕುಳಿತಿದ್ದೀರಿ. ಮುಂಬಯಿಯಲ್ಲಿ ನಾನು ಕಂಡಂತೆ ಪ್ರತಿಭಾವಂತರಿಗಿಂತಲೂ ಅದೃಷ್ಟವಂತರೇ ಮಜಬೂತಾದ ಬದುಕನ್ನು ನಡೆಸ್ತಿರೋದು. ಈಗ ನನ್ನಿಂದೇನಾಗಬೇಕು?' ವಿಷಯಕ್ಕೆ ಬಂದಿದ್ದ ವಾದಿರಾಮ್ ಕಪೂರ್.

'ನನ್ನ ಮೊಮ್ಮಗ ಸೋನಾಲಾಲನಿಗೆ ಮಿಡ್ ಬ್ರೈನ್ ಆಕ್ಟಿವೇಷನ್ ಮಾಡ್ಬೇಕು. ಮನೆಗೆ ಬಂದು ಮಾಡ್ಬೇಕು' ಗುನ್ನಾಲಾಲನಿಗೆ ಮಾತನಾಡಲು ಬಹಳ ವಿಷಯಗಳಿದ್ದರೂ ತಾನೂ ನೇರ ಪಾಯಿಂಟ್‌ಗೆ ಬಂದಿದ್ದ. 'ನಮ್ಮ ಇನ್‌ಸ್ಟಿಟ್ಯೂಟ್‌ಗೆ ಸ್ಟೂಡೆಂಟ್ ಆಗಿ ಬಂದರೆ ಗಂಟೆಗೆ ಸಾವಿರ ರೂಪಾಯಿ ಫೀಜು, ಸ್ಟೂಡೆಂಟ್ ಮನೆಗೆ ನಮ್ಮ ಟೀಚರ್ಸ್ ಬರಬೇಕಾದ್ರೆ ಅದೇ ಗಂಟೆಗೆ ಮೂರು ಸಾವಿರ ರೂಪಾಯಿ ಫೀಜು' ಎಂದಿದ್ದ ವಾದಿರಾಮ್ ಕಪೂರ್. ಮಫತ್ಲಾಲ್ ಗುನ್ನಾಲಾಲ್ ಸರಕು ವ್ಯಾಪಾರಿಯಾದರೆ ವಾದಿರಾಮ್ ಕಪೂರ್ ಬುದ್ಧಿಮತ್ತೆಯ ವ್ಯಾಪಾರಿಯಾಗಿದ್ದ.

'ನನ್ನ ಮೊಮ್ಮೊಗನಿಗೆ ಬೇರೆ ಟೀಚರ್ಸ್ ಬೇಕಿಲ್ಲ, ನೀವೇ ಬಂದು ಟೀಚ್ ಮಾಡ್ಬೇಕು' ಎಂದು ಗುನ್ನಾಲಾಲ್ ಕಂಡೀಷನ್ ಹಾಕಿದ್ದ.

'ನಾನು ಬಂದರೆ ಗಂಟೆಗೆ ಹತ್ತು ಸಾವಿರ ಫೀಜ್ ಕೊಡ್ಬೇಕು' ನಗುತ್ತಲೇ ತಾನೂ ಕಂಡೀಷನ್ ಹಾಕಿದ್ದ ವಾದಿರಾಮ್ ಕಪೂರ್. ಡ್ರಾಯರ್‌ನಿಂದ ಚೆಕ್ ಬುಕ್ ತೆಗೆದು ಐದು ಲಕ್ಷ ಅಮೌಂಟ್ ಬರೆದು ವಾದಿರಾಮ್ ಕಪೂರ್‌ಗೆ ಕೊಡುತ್ತಾ 'ಆಗಲಿ, ಸದ್ಯಕ್ಕೆ ಅಡ್ವಾನ್ಸ್ ಆಗಿ ಈ ಚೆಕ್ ತೆಗೆದುಕೊಳ್ಳಿ. ಕ್ಲಾಸುಗಳು ಜಾಸ್ತಿಯಾದರೆ ಮತ್ತೊಂದು ಚೆಕ್ ಕೊಡ್ತೀನಿ' ಎಂದಿದ್ದ ಮಫತ್ಲಾಲ್ ಗುನ್ನಾಲಾಲ್.

ಮೊದಲ ಕ್ಲಾಸಿನಲ್ಲೇ ಮುಂದೆ ಕುಳಿತಿದ್ದ ಮಿಡ್ ಬ್ರೈನ್ ಎಕ್ಸ್‌ಪರ್ಟ್ ವಾದಿರಾಮ್ ಕಪೂರ್‌ಗೆ 'ನೀವು ಮಿಡ್ ಬ್ರೈನ್ ಮಾತ್ರ ಏಕೆ ಆಕ್ಟೀವ್ ಮಾಡ್ತೀರಾ. ಲೆಫ್ಟ್ ಅಂಡ್ ರೈಟ್ ಬ್ರೈನುಗಳು ಏನು ಪಾಪ ಮಾಡಿವೆ?' ಎಂದು ಪ್ರಶ್ನೆಯನ್ನು ಎಸೆದಿದ್ದ ಸೋನಾಲಾಲ್. ವಾದಿರಾಮ್ ಕಪೂರ್ ಶಾಕ್ ಆಗಿದ್ದ. ತನ್ನ ವೃತ್ತಿ ಜೀವನದಲ್ಲಿ ಯಾರೂ ಇಂಥದ್ದೊಂದು ಪ್ರಶ್ನೆಯನ್ನು ಕೇಳಿರಲಿಲ್ಲ, ಅದೂ ಇಂಥ ಚಿಕ್ಕ ವಯಸ್ಸಿನವರು. ವಾದಿರಾಮ್ ಕಪೂರ್ ಏನೂ ಕಡಿಮೆ ಜಾಯಮಾನದವನೇನೂ ಆಗಿರಲಿಲ್ಲ. ಅವನು ಚಿಕ್ಕಂದಿನಲ್ಲಿಯೇ ಮ್ಯಾಜಿಕ್ ಕಲಿತವನು. ಅವನು ಜೋಗೇಶ್ವರಿಯ ಗುಫ ಮುನಿಸಿಪಲ್ ಸ್ಕೂಲಿನಲ್ಲಿ ಐದರಿಂದ ಹತ್ತನೆಯ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವಾಗಲೇ ಮ್ಯಾಜಿಕ್ ಶೋಗಳನ್ನು ನಡೆಸುತ್ತಿದ್ದ. ಆ ಸಮಯದಲ್ಲಿ ಅವನ ಅಪ್ಪ ಅಮ್ಮ ಇಬ್ಬರೂ ಬಲ್ಲಕ್ರಾ ಸಹರಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಅಮ್ಮ ನರ್ಸ್ ಆಗಿದ್ದರೆ, ಅಪ್ಪ ಸೆಕೆಂಡ್ ಡಿವಿಷನ್ ಕ್ಲರ್ಕ್ ಆಗಿದ್ದ. ಇಬ್ಬರಿಗೂ ವಾದಿರಾಮ್ ಕಪೂರನನ್ನು ಡಾಕ್ಟರ್ ಆಗಿ ಮಾಡಬೇಕೆಂಬ ಕನಸಿತ್ತು. ಮ್ಯಾಥಮೆಟಿಕ್ಸ್‌ನಲ್ಲಿ ತುಂಬಾ ಬ್ರಿಲಿಯಂಟ್ ಇದ್ದ ಕಪೂರ್ ಸೈನ್ಸ್‌ನಲ್ಲಿ ಮಾತ್ರ ಬಹಳ ವೀಕಿದ್ದ. ಮ್ಯಾಜಿಕ್ ಶೋಗಳನ್ನು ನಡೆಸುತ್ತಾ ಸ್ಕೂಲಿನಲ್ಲಿರುವಾಗಲೇ ಒಳ್ಳೆಯ ದುಡ್ಡನ್ನು ದುಡಿಯಲಾರಂಭಿಸಿದ. ಮ್ಯಾಜಿಕ್ ಬಗ್ಗೆ ಅನೇಕ ಪುಸ್ತಕಗಳನ್ನು ಓದಿದವನಿಗೆ ಅದೊಂದು ಮೈಂಡ್ ಗೇಮ್ ಎಂಬುದು ನಿಚ್ಚಳವಾಯಿತು. ಅದರೊಂದಿಗೆ ಹಿಪ್ನಾಟಿಸಂ ವಿದ್ಯೆಯನ್ನೂ ಕಲಿತ. ವಿದ್ಯಾಭ್ಯಾಸ ಹತ್ತನೆಯ ತರಗತಿಗೆ ಕೊನೆಗೊಂಡಿತು.

ನಾಗ್ಪಾಡ್, ಮಾತುಂಗ, ಅಂಧೇರಿ, ಧಾರಾವಿ ಮುಂತಾದ ಕಡೆ ಪ್ರತಿನಿತ್ಯ ಮ್ಯಾಜಿಕ್ ಶೋಗಳನ್ನು ನಡೆಸುತ್ತಿದ್ದ. ಮನೆಗೆ ಬರುವುದೇ ಅಪರೂಪವಾಯಿತು. ಅವನ ಅಕೌಂಟ್‌ನಲ್ಲಿ ಲಕ್ಷಾಂತರ ರೂಪಾಯಿ ಜಮಾ ಆಗುವುದರೊಂದಿಗೆ ಸಾವಿರಾರು ಅಭಿಮಾನಿಗಳೂ ಹುಟ್ಟಿಕೊಂಡರು. ಟೀವಿ ಚಾನಲ್‌ಗಳವರೂ ವಾದಿರಾಮ್ ಕಪೂರನ ಮ್ಯಾಜಿಕ್ ಶೋಗಳನ್ನು, ಸಂದರ್ಶನಗಳನ್ನು ಬಿತ್ತರಿಸತೊಡಗಿದರು. ಹೀಗಿರುವಾಗ ಜುಹೂವಿನ ಕಾಲೇಜೊಂದರಲ್ಲಿ ಮ್ಯಾಜಿಕ್ ಶೋ ಮಾಡುತ್ತಿರುವಾಗ ಅವನ ಕೈಚಳಕಕ್ಕೆ ಮೆಚ್ಚಿ ಎರಡನೆಯ ಪಿಯುಸಿಯ ಸುಂದರ ಹುಡುಗಿಯೊಬ್ಬಳು ಸ್ಟೇಜ್ ಹತ್ತಿ ವಾದಿರಾಮ್ ಕಪೂರನ ಕೈಯಲ್ಲಿ ಐದು ಸಾವಿರ ರೂಪಾಯಿ ಇಡುವುದಲ್ಲದೆ ಅವನನ್ನು ಬಲವಾಗಿ ತಬ್ಬಿಕೊಂಡು ಮುತ್ತಿಟ್ಟು ತಾನು ಕಪೂರನನ್ನು ತುಂಬಾ ಪ್ರೀತಿಸುವುದಾಗಿ ಘೋಷಿಸಿದ್ದಳು. ಈ ವಿಷಯ ಮುಂಬೈ ಮಹಾನಗರ ಪಾಲಿಕೆಯ ಕಮಿಷನರ್ ಆಗಿದ್ದ ಹುಡುಗಿಯ ಅಪ್ಪನಿಗೆ ತಿಳಿಯುತ್ತದೆ. ಅಷ್ಟೇ, ಮುಂಬಯಿಯ ಯಾವ ಏರಿಯಾದಲ್ಲೂ ವಾದಿರಾಮ್ ಕಪೂರ್ ಮ್ಯಾಜಿಕ್ ಶೋ ನಡೆಸದಂತೆ